ಟೈಮ್ ಟೇಬಲ್ ನಿಗದಿಪಡಿಸಿದ್ದ. ಇದರಲ್ಲಿ ಒಂದು ನಿಮಿಷವೂ ಆಚೆ ಈಚೆ ಆಗುವಂತಿರಲಿಲ್ಲ. ಎಲ್ಲದಕ್ಕೂ ಮಿಲಿಟರಿ ಟೈಮ್ ಫಿಕ್ಸ್.

ನೀರು ನಿಂತು ಜೌಗಿನಂತಿದ್ದ ಪ್ರದೇಶವೊಂದು ಅವನ ಮನೆ ಇಳಿಜಾರಿನಲ್ಲಿತ್ತು. ಅಲ್ಲಿ ಪಕ್ಷಿಗಳು ಇಳಿದು ಕೂರಲು ಕವಲಿನ ಒಣ ರೆಂಬೆಯನ್ನು ನೆಡಿಸಿದ್ದ. ಒಂದು ಮರೆಯಲ್ಲಿ ನಮ್ಮನ್ನು ಕೂರಲು ಹೇಳಿ ಎಂಟು ಗಂಟೆಯ ತನಕ ಅಲ್ಲಾಡಬಾರದು, ಮಾತಾಡಬಾರದು ಎಂದು ತಾಕೀತು ಮಾಡಿದ. ಹಕ್ಕಿಗಳು ಈಗ ಬರುತ್ತವೆ ನೋಡುತ್ತಿರಿ ಎಂದು ಆತ ಹೇಳಿದ ಐದು ನಿಮಿಷಕ್ಕೇ ಹೇಳಿ ಕಳಿಸಿದಂತೆ ಮಿಶ್ರ ವರ್ಣದ ಮಲಬಾರ್ ಗಿಳಿಗಳು ಹಾರಿ ಬಂದವು. ಕೆಲ ಹೊತ್ತಿನಲ್ಲೇ ಕುವೆಂಪು ಅವರು ಬಲು ಇಷ್ಟ ಪಡುತ್ತಿದ್ದ ನೀಳ ಕಪ್ಪು ರೆಕ್ಕೆಯ ಕಾಜಾಣ ನೆಗೆದು ಬಂದಿತು. ಪಟಪಟ ಪಟಗಳ ಚಚ್ಚಿಕೊಂಡೆವು.

ಹಕ್ಕಿಲೋಕದಲ್ಲಿ ಕಾಜಾಣದಷ್ಟು ಬುದ್ಧಿವಂತ ಹಾಗೂ ಧೈರ್ಯಶಾಲಿ ಹಕ್ಕಿ ಮತ್ತೊಂದಿಲ್ಲ. ಡ್ರೋಂಗೋ ಎಂಬ ಪ್ರಜಾತಿಯ ಈ ಹಕ್ಕಿ ಸಂತಾನಗಳೇ ಭಾರಿ ಯುದ್ಧಕೋರರು. ದೊಡ್ಡ ಪಕ್ಷಿಗಳಿಗೆ ಬೆದರಿಕೆ ಹಾಕಿ ಓಡಿಸುವಷ್ಟು ಛಾತಿ ಇವಕ್ಕುಂಟು. ಈ ಕಾರಣಕ್ಕೆ ಸಣ್ಣಪುಟ್ಟ ಪಕ್ಷಿಗಳು ಕಾಜಾಣ ವಾಸಿಸುವ ಸನಿಹದಲ್ಲೇ ಸುರಕ್ಷತೆಯ ದೃಷ್ಟಿಯಲ್ಲಿ ತಮ್ಮ ಗೂಡು ಕಟ್ಟಿಕೊಳ್ಳುತ್ತವೆ. ಸಾಕಷ್ಟು ಹಕ್ಕಿಗಳ ದನಿಯನ್ನು ಅನುಕರಣೆ ಮಾಡುವ ಮಿಮಿಕ್ರಿ ಪಡ್ಡೆತನ ಇದಕ್ಕೆ ಒಲಿದಿದೆ. ಇದರ ಕೂಗಿಗೆ ಕಾಡಿನಲ್ಲಿ ಅನೇಕ ಹಕ್ಕಿಗಳು ಬೆಸ್ತು ಬೀಳುವುದುಂಟು. ಕಾಡಿನಲ್ಲಿ ಇತರೆ ಖಗಗಳ ರೇಗಿಸುವ, ಚುಡಾಯಿಸಿ ಗೋಳಾಡಿಸುವ, ಕಾಜಾಣ ಅನೇಕ ವಿಷಯಗಳಲ್ಲಿ ವಿಶೇಷವೂ ಹೌದು. ಇದರ ಚಿತ್ರಗಳು ಜೊತೆಗೆ ಜೋಡಿಯಾಗಿ ಬಂದ ಮರಕುಟಿಕ ಹಕ್ಕಿಗಳ ಪಟವಂತೂ ನನ್ನ ಪಾಲಿಗೆ ಹೊಸತು.

ಟೈಮಾಯಿತು ಎದ್ದೇಳಿ ಎಂದಾಗಲೇ ನಮಗೆ ಎರಡು ಗಂಟೆ ಕಳೆದಿರುವುದು ಗೊತ್ತಾಗಿದ್ದು. ಇನ್ನು ಸ್ವಲ್ಪ ಹೊತ್ತು ಕೂರುತ್ತೇವೆ ಎಂದಾಗ ಎಲ್ಡೋಸ್ ಬಿಲ್ ಕುಲ್ ಆಗಲ್ಲ, ಒಂದು ಸೆಕೆಂಡ್ ಕೂಡ ಇರೋ ಹಂಗಿಲ್ಲ ಎಂದು ಮುಲಾಜಿಲ್ಲದೆ ಹೇಳಿದ. ನಾನು ಅಸಹನೆಯಿಂದಲೇ ಯಾಕೆಂದು ಕೇಳಿದೆ. ಇದು ನನ್ನ ನಿಯಮ ಎಂದ. ನಿಮಗೆ ಹಿಲ್ ಮೈನಾ ಫೋಟೊ ಬೇಕೆಂದರೆ ನೀವು ಏಳಲೇಬೇಕು. ಈಗ ಬೇರೊಂದು ಕಡೆಗೆ ಹೋಗಬೇಕು. ಟೈಮಾದರೆ ಮತ್ತದೂ ಸಿಗುವುದಿಲ್ಲ ಎಂದ. ನಮಗೆ ಹಿಲ್ ಮೈನಾ ಕೂಡ ಮುಖ್ಯ ಹಕ್ಕಿ. ಅದರ ಒಂದು ಪಟವೂ ನನ್ನ ಬಳಿ ಇರಲಿಲ್ಲ. ಕಾಜಾಣ, ಕೆಂಪು ತಲೆ ಮರಕುಟಿಕ ಈ ಮೊದಲೇ ತೆಗೆದಿದ್ದೆನಾದರೂ ಇವತ್ತಿನಷ್ಟು ಪಸ್ಸಂದಾಗಿ ಬಂದಿರಲಿಲ್ಲ. ಒಲ್ಲದ ಮನಸ್ಸಿನಿಂದಲೇ ಎದ್ದು ಅವನ ಮನೆ ಮುಂದಿದ್ದ ಮರದ ಬಳಿ ಹೋಗಿ ಶಾಲಾ ಮಕ್ಕಳಂತೆ ನಿಂತೆವು.

ಅವನೊಂದು ಜಾಗ ತೋರಿಸಿ ನೀವಿಲ್ಲೇ ಕೂರಬೇಕು. ಕ್ಯಾಮೆರಾ ರೆಡಿ ಇಟ್ಟುಕೊಂಡಿರಿ. ನಾನು ಪಪ್ಪಾಯಿ ಹಣ್ಣು ಇಟ್ಟ ತಕ್ಷಣ ಅದು ಬರುತ್ತದೆ. ಕೇವಲ ಮೂರು ಸಲ ಮಾತ್ರ ಬಂದು ಹೋಗುತ್ತದೆ. ನಾಚಿಕೆ ಸ್ವಭಾವದ ಈ ಹಕ್ಕಿ ಹೆಚ್ಚು ಹೊತ್ತು ನಿಲ್ಲುವುದಿಲ್ಲ. ಒಂದೊಮ್ಮೆ ಇದರ ಪಟ ಸಿಗದಿದ್ದರೆ ನಾನು ಜವಾಬ್ದಾರನಲ್ಲ. ಸಿಕ್ಕ ಚಾನ್ಸ್ ಮಿಸ್ಸು ಮಾಡಿಕೊಳ್ಳಬೇಡಿ. ಬಹಳ ಜನ ಎಡವಟ್ಟು ಮಾಡಿಕೊಂಡು ಆಮೇಲೆ ಗೊಣಗಾಡುತ್ತಾರೆ. ವೇಗವಾಗಿ ಬಂದು ಹೋಗುವ ಕಾರಣ ಕ್ಯಾಮೆರಾದ ಶಟರ್ ಸ್ಪೀಡ್ ಹೆಚ್ಚಿಗೆ ಇಟ್ಟುಕೊಳ್ಳಿ. ಕ್ಯಾಮೆರಾ ಪ್ಯಾನ್ ಕೂಡ ಅಷ್ಟೇ ವೇಗವಾಗಿ ಮಾಡಬೇಕು. ಟ್ರೈ ಪ್ಯಾಡಿನ ಕೀ ಲಿವರ್‌ಗಳನ್ನು ಲೂಸ್ ಮಾಡಿಟ್ಟುಕೊಳ್ಳಿ ಎಂದು ಸಲಹೆ ಕೊಟ್ಟು ಹೋದ.

ಅನೇಕ ಪಟಗಾರರಿಗೆ ಇಂತಹ ಬಿಟ್ಟಿ ಉಪದೇಶಗಳು ಮೂರನೇ ವ್ಯಕ್ತಿ ಕೊಡುವುದು ಇಷ್ಟವಾಗುವುದಿಲ್ಲ. ಕೆಲವರ ಅಹಂ ಆಗ ಎದ್ದು ಕುಣಿದಾಡಿ ಬಿಡುವುದುಂಟು. ನನ್ನ ಜೀವನದಲ್ಲಿ ಅದೆಷ್ಟು ಹಕ್ಕಿಗಳ ಫೋಟೊ ತೆಗೆದಿಲ್ಲ. ಎಲ್ಲೆಲ್ಲಿಗೆ ಹೋಗಿ ಬಂದಿಲ್ಲ. ದೇಶ ವಿದೇಶ ಸುತ್ತಿರೋ ನನಗೆ ಕ್ಯಾಮೆರಾ ಸೆಟ್ಟಿಂಗ್ ಏನೆಂದು ಒಬ್ಬ ಯಕಶ್ಚಿತ್ ನ್ಯಾಚುರಲಿಸ್ಟ್ ಕಲಿಸಿ ಕೊಡಬೇಕಾ? ಎಂದು ಉರಿದು ಬೀಳುತ್ತಾರೆ.

ಇನ್ನೂ ಕಲಿಯುತ್ತಿರುವ ನಾನು ಯಾರು ಯಾವುದೇ ಬಗೆಯ ಫೋಟೊಗ್ರಫಿ ಟಿಪ್ಸ್ ಕೊಟ್ಟರೂ ಖಂಡಿತಾ ಮೂಗು ಮುರಿಯುವುದಿಲ್ಲ. ಬದಲಿಗೆ ಮುಗಿಬಿದ್ದು ಕೇಳಾದರೂ ಪಡೆಯುತ್ತೇನೆ. ಇದರಲ್ಲಿ ಯಾವ ಸಂಕೋಚಗಳೂ ಇಲ್ಲ. ಕೆಲವರಿಗೆ ಮಾತ್ರ ಇದೊಂದು ಮರ್ಯಾದೆಯ, ಪ್ರತಿಷ್ಠೆಯ ವಿಷಯ. ಅದೇನೋ ಲೂಸೋ ಮಾರಾಯ ನೀನು ಎಲ್ಲರ ಹತ್ರನೂ ಮಾನಮರ್ಯಾದೆ ಬಿಟ್ಟು ಕ್ಯಾಮೆರಾ ಸೆಟ್ಟಿಂಗ್ಸ್ ಸಲಹೆ ಕೇಳ್ತೀಯಾ? ಇವನು ಎಳಸು ನನ್ಮಗ ಅಂತ